

**ವಾಟರ್ ಪ್ರೂಫ್ ಬಟ್ಟೆ, ಬ್ಯಾಗ್ ಆಯ್ಕೆ ಮಾಡಿಕೊಳ್ಳಿ. ಸಿಂಥೆಟಿಕ್ ಬಟ್ಟೆಗಳು ಹಗುರವಾಗಿರುವುದರಿಂದ ಬಹು ಬೇಗನೆ ಒಣಗುತ್ತವೆ. ಅಲ್ಲದೆ, ಮಳೆಯು ಸಾಮಾನ್ಯವಾಗಿ ಚಳಿಯನ್ನು ಹೆಚ್ಚಿಸುವ ಕಾರಣದಿಂದ ಸ್ವೆಟರ್, ಗ್ಲೌಸ್, ಛತ್ರಿ, ಟೋಪಿಗಳನ್ನು ಕೊಂಡೊಯ್ಯಿರಿ.**



ಕಾಡಿನಲ್ಲಿ, ಕಾವೇರಿಯ ತೀರದಲ್ಲಿ, ಅಥವಾ ಮೈಸೂರಿನ ಚಾಮುಂಡಿ ಬೆಟ್ಟದ ಒಡಲಲ್ಲಿ ಮಳೆ ಸುರಿಯುವಾಗ, ಅದು ಒಂದು ಕಾವ್ಯವೇ ಆಗುತ್ತದೆ. ಮಳೆಯ ಒಂದೊಂದು ಹನಿಯೂ ಒಂದು ಒಡವೆ. ಮಳೆಯನ್ನು 'ಒಡಲ ಒಡವೆ' ಎಂದು ಬಣ್ಣಿಸಿದರು ಕವಿ ಜಿ.ಎಸ್. ಶಿವರುದ್ರಪ್ಪ.

ಮಳೆ
ಎರಡೇ ಅಕ್ಷರ
ಭಾವಗಳು ಸಾವಿರ

ಮಳೆ ಅಂದರೆ ನೆನಪು. ಬೆಚ್ಚನೆಯ ಪ್ರೀತಿ. ಒಡಲಾಳದ ಬೇಗುದಿ. ಪ್ರೇಮದ ಕಾವ್ಯ. ಏನೆಲ್ಲ... ಅಲ್ಲವೇ?

ಮಳೆಯ ದೇವ ಅಂದರೆ ವರುಣ. ಸಮುದ್ರ, ನದಿ, ಎಲ್ಲ ನೀರಿನ ಮೂಲಗಳ ಒಡೆಯ, ರಕ್ಷಕ ವರುಣ. ಭೂಮಿ ವರುಣನ ಕೋಪಕ್ಕೆ ತುತ್ತಾದರೆ ಮಳೆ ಬರುವುದಿಲ್ಲ ಎಂಬ ನಂಬಿಕೆ ಇದೆ. ಋಷಿಮುನಿಗಳು 'ವರುಣ ಯಾಗ' ಮಾಡುತ್ತಿದ್ದರಂತೆ. ಜಲಸಂಸ್ಕೃತಿಯಲ್ಲಿ ಮಳೆ ಅಂದರೆ ದೇವರು. ಇಂದ್ರನ ಪೂಜೆ ಮಾಡಿದರೆ ಮಳೆ ಚೆನ್ನಾಗಿ ಸುರಿಯುತ್ತದೆ ಎನ್ನುವ ನಂಬಿಕೆ ಇದೆ. ಕೊಡಗು ಶಿವಮೊಗ್ಗ ಕರಾವಳಿ ಪ್ರದೇಶಗಳಲ್ಲಿ, ಕಾಡಿನಲ್ಲಿರುವ ದೇವತೆಗಳು ಮಳೆಯನ್ನು ನಿಯಂತ್ರಿಸುತ್ತವೆ ಎಂಬ ನಂಬಿಕೆ ಇದೆ.

ಎಂಥ ಚಂದ ಅಲ್ಲವೇ ಇದು?
ವಿಜ್ಞಾನಕ್ಕೂ ಹತ್ತಿರವೇ ತಾನೇ?
ಕಾಡಿದ್ದರೆ ಮಳೆ ಅನ್ನುತ್ತದೆ ಅಲ್ಲವೇ ವಿಜ್ಞಾನ.

## ಆಹಾ.. ಚಂದಮಾಮದ ಮಳೆ ಕಥೆಗಳು

ಈಗಲೂ ನೆನಪಿದೆ. ಮಳೆಗಾಗಿ ಕಪ್ಪೆ ಮದುವೆ ಮಾಡುವುದು, ಕತ್ತೆಗಳನ್ನು ಪೂಜೆ ಮಾಡುವುದು, ನರಿ ಮಳೆಯನ್ನ ಕರೆಯುವುದು... ಹೀಗೇ ಏನೇನೋ ಕಲ್ಪನೆಗಳು. ಮಳೆಯಲ್ಲಿ ನೆಂದು ಯಾರೋ ದಾರಿತಪ್ಪಿ ಯಾರದೋ ಮನೆಗೆ ಬರುವುದು, ಹೀಗೆಲ್ಲಾ...

ಮಳೆ ಎಷ್ಟೋ ಸಾವು ನೋವು ತಂದರೂ ಮಳೆಯನ್ನು ಯಾರೂ ಬೈಯ್ಯುವುದಿಲ್ಲ. ಬಾ ಎನ್ನುವಾಗಲೂ ಪ್ರಾರ್ಥನೆ. ಕಾಡಬೇಡ, ಹೋಗಿ ಬಾ ಎನ್ನುವಾಗಲೂ ಪ್ರಾರ್ಥನೆಯೇ.

ಧಾರಾಕಾರ ಮಳೆ (ಭಾರೀ ಮಳೆ), ತುಂತುರು ಮಳೆ (ನಿಧಾನವಾದ, ಸೌಮ್ಯ ಮಳೆ), ಕಾರ್ಮೋಡ ಮಳೆ (ಗುಡುಗುಸಿಡಿಲಿನೊಂದಿಗೆ), ಮಂಜಿನ ಮಳೆ (ಹನಿಗಳು ತುಂಬಾ ಸೂಕ್ಷ್ಮವಾಗಿರುವುದು). ಹೀಗೆಲ್ಲಾ ಮಳೆಯ ಪ್ರಕಾರಗಳು...

ಮಳೆ ಅಂದರೆ ಅದೊಂದು ಪ್ರಕೃತಿಯ ಸತ್ಯ. ಕಾಲ ಬದಲಾವಣೆ ಸೂಚಿಸಲು ಮನದ ತಲ್ಲಣವನ್ನು ತುಂತುರು ತುಂತುರಾಗಿಸಲು ಮಳೆಯು ಸುರಿಯುತ್ತದೆ.

ಮಳೆ ಹನಿಯಿತು..
ಮಳೆ ಸುರಿಯಿತು..
ಮಳೆ ಹರಿಯಿತು ..

ಅದು ನಮ್ಮೊಳಗೆ ಇಳಿಯಿತು. ಹೌದು. ಪಟ ಪಟ ಅನ್ನಿ, ಚಿಟಪಟ ಅನ್ನಿ, ರಾಗ ಅನ್ನಿ, ತಾಳ ಅನ್ನಿ, ಮಳೆ, ಅದು ಸಂಗೀತ, ತಾಳ, ರಾಗ, ಮಾತು, ಮೌನ, ಎಲ್ಲವೂ. ನಮ್ಮದೇ ಮಾತಿನ ಪದ. ಹೃದಯದ ಹದ. ಬದುಕಿನ ಆರಾಧನೆ, ಭಾವಗಳ ಸಂಕೇತ ಮಳೆ. ಅದು ಪ್ರಾರಂಭವೂ ಹೌದು. ಮುಕ್ತಾಯವೂ ಪ್ರಕೃತಿಯ ಹಾಡು. ಒಂದು ಆಧ್ಯಾತ್ಮಿಕ ಆನಂದ.

ಚಿತ್ರಗಳು: ಬಿ.ಎಂ. ಕೇದಾರನಾಥಸ್ವಾಮಿ, ರಂಜು ಪಿ.